ಹಸಿರು ಕಾರ್ಡ್ ನೀಡುವಾಗ ಆದಾಯದ ಮಿತಿ

1624. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹಸಿರು ಕಾರ್ಡು ನೀಡುವ ಬಗ್ಗೆ ಆದಾಯ ಮಿತಿಯನ್ನು ಏರಿಸಲಾಗಿದೆಯೇ?
ಆ) ಹಸಿರು ಕಾರ್ಡಿಗೆ ದಿವಂಗತ ಮಾಜಿ ಪ್ರಧಾನಿ ಇಂದಿರಾಗಾಂಧಿಯವರ ಭಾವಚಿತ್ರ ಹಾಕಲು ನಿರ್ಧರಿಸಿದೆಯೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

ಅ) ಹೌದು
ವಾರ್ಷಿಕ ವರಮಾನ ರೂ. 3,500–00 ರಿಂದ ರೂ.6,400–00 ಕ್ಕೆ ಏರಿಸಲಾಗಿದೆ.
ಆ) ಹೌದು.

ಸರ್ಕಾರಕ್ಕೆ ವಹಿಸಿಕೊಂಡಿರುವ ತಾಲ್ಲೂಕು ಬೋರ್ಡ್ ಹೈಸ್ಕೂಲ್‌ಗಳ ಸಂಖ್ಯೆ

1579. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) 1971ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರ ವಹಿಸಿಕೊಂಡಿರುವ ತಾಲ್ಲೂಕು ಬೋರ್ಡ್ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು.
ಆ) ಈ ತಾಲ್ಲೂಕು ಬೋರ್ಡ್ ಪ್ರೌಢ ಶಾಲೆಗಳಿಗೆ ಸರಿಯಾದ ಸಿಬ್ಬಂದಿ ಕೊಡಲಾಗುತ್ತಿದೆಯೇ.
ಇ) ಅವುಗಳ ಸ್ಥಿತಿಗತಿಗಳನ್ನು ತಿಳಿಸುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) –

ಅ) 291
ಆ) ಹೌದು
ಇ) ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ನಾಲ್ಕು ಹಂತಗಳಲ್ಲಿ (1971, 1973, 1976 ಮತ್ತು 1977) ಒಟ್ಟು 367 ಪ್ರೌಢಶಾಲೆಗಳನ್ನು ಸರ್ಕಾರದ ವಶಕ್ಕೆ ವಹಿಸಿಕೊಳ್ಳಲಾಗಿದೆ. ಈ ಶಾಲೆಗಳನ್ನು ಸಿಬ್ಬಂದಿ ಸಮೇತವಾಗಿ ಸರ್ಕಾರ ವಹಿಸಿಕೊಂಡು ಸರ್ಕಾರವು ಸ್ಥಾಪಿಸಿದ ಶಾಲೆಗಳಿಗೆ ನೀಡುವಂತೆಯೇ ಸಾದಿಲ್ವಾರು, ಕಟ್ಟಡ ನಿರ್ಮಾಣ ಮತ್ತು ರಿಪೇರಿ ಹಾಗೂ ಸಿಬ್ಬಂದಿ ವರ್ಗಕ್ಕೆ ಅಧಿಕೃತ ಬಡ್ತಿ, ವೇತನ ಬಡ್ತಿ ಶಾಲೆಗೆ ಬೇಕಾದ ಅಗತ್ಯ ಸಿಬ್ಬಂದಿ ವರ್ಗದ ನೇಮಕ ಇತ್ಯಾದಿ ಎಲ್ಲಾ ಸೌಲಭ್ಯಗಳನ್ನು ನೀಡಿ ಸರ್ಕಾರಿ ಶಾಲೆಯಂತೆ ಪರಿಗಣಿಸಿ ನಡೆಸಲಾಗುತ್ತಿದೆ.

ಗಮನ ಸೆಳೆಯುವ ಸೂಚನೆಗಳು

ರಸ್ತೆ ಸಾರಿಗೆಯ ಸಂಸ್ಥೆಯ ನೌಕರರ ಒಕ್ಕೂಟದಿಂದ ಮುಷ್ಕರ ಘೋಷಣೆ.

ಶ್ರೀ ಎಸ್.ಚಿಕ್ಕಮಾದು (ಹುಣಸೂರು):- ಮಾನ್ಯ ಉಪಾಧ್ಯಕ್ಷೀಣಿಯವರೆ, ದಿನಾಂಕ 11.3.92ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ಒಕ್ಕೂಟವು ನಗರದಲ್ಲಿ ಬಸ್ಸುಗಳನ್ನು ಸ್ಥಗಿತಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದರಿಂದ ಬೆಂಗಳೂರಿನಂತ ಮಹಾನಗರದಲ್ಲಿ ಶ್ರೀಸಾಮಾನ್ಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ, ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.